# CBSE challenges stay on NEET results

## Says Madras High Court order has derailed admission schedule

LEGAL CORRESPONDENT
NEW DELHI

The Central Board of Secondary Education (CBSE) on Friday approached the Supreme Court against a Madras High Court order staying the declaration of the NEET 2017 results.

On May 24, the Madurai Bench of the High Court granted an interim stay on the declaration of the results on a batch of petitions alleging that the test was not conducted in a uniform manner and the question papers in English and Tamil were different and of varying difficulty.

The CBSE mentioned the matter before a Vacation Bench of Justices Ashok Bhushan and Deepak Gupta and said that because of the stay, the schedule of counselling and admission to the MBBS and BDS courses had gone "haywire."

The fate of 12 lakh candidates was under suspension because of the order, it said.

### Allegation dismissed

The CBSE dismissed the allegation that the questions in English and vernacular languages were of varying levels of difficulty.

They were set and whetted by experts, it said. It pointed out that various such petitions were pending before different High Courts and they should all be transferred to the Supreme Court.

Around 10.5 lakh students have taken the exam in either Hindi or English and 1.25 lakh-1.50 lakh in eight vernacular languages.

ವಿಜಯ ಕರ್ನಾಟಕ



# ಆಯುಷ್ ಕೋರ್ಸ್‌ ಪ್ರವೇಶಕ್ಕೂ ನೀಟ್

**ಹೊಸದಿಲ್ಲಿ:** ಮುಂದಿನ ಶೈಕ್ಷಣಿಕ ವರ್ಷದಿಂದ (2018-19) ಆಯುಷ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಎದುರಿಸಬೇಕಾಗುತ್ತದೆ.



ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ (ಆಯುಷ್) ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯನ್ನು ಮೇಲ್ದರ್ಜೆಗೇರಿಸುವ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸೆಳೆಯುವ ಪ್ರಯತ್ನವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆಯುಷ್ ಸಚಿವಾಲಯ ಎಲ್ಲ ರಾಜ್ಯ ಸರಕಾರಗಳಿಗೆ ಕಳುಹಿಸಿರುವ ಮಾರ್ಗದರ್ಶಿ ಸೂತ್ರಗಳಲ್ಲಿ ಇದನ್ನು ತಿಳಿಸಲಾಗಿದೆ.

ವಿಶ್ವಾದ್ಯಂತ ಆಯುರ್ವೇದ, ಹೋಮಿಯೋಪಥಿ, ನ್ಯಾಚುರೋಪಥಿ, ಯುನಾನಿ ಔಷಧಗಳು ಮತ್ತು ಯೋಗಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಈ ಕೋರ್ಸ್‌ಗಳನ್ನು ಬಯಸುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಹಾಗಾಗಿ ಈ ಕೋರ್ಸ್‌ಗಳ ಶಿಕ್ಷಣ ಗುಣಮಟ್ಟವನ್ನು ಕಾಯ್ದುಕೊಳ್ಳುವ ಅಗತ್ಯ ಕಂಡುಬಂದಿದೆ ಎಂದು ಆಯುಷ್ ಸಚಿವ ಶ್ರೀಪಾದ್ ಯೆಸ್ಸೋ ನಾಯ್ಕ್ ಹೇಳಿದ್ದಾರೆ. »06

# ಆಯುಷ್ ಕೋರ್ಸ್...

» ಮೊದಲ ಪುಟದಿಂದ

ನೀಟ್ ಅಳವಡಿಕೆ ನಂತರ ಯಾವುದೇ ಆಯುಷ್ ಕಾಲೇಜುಗಳು ತಮ್ಮ ಸೀಟು ತುಂಬಿಸಿಕೊಳ್ಳಲು ಖಾಸಗಿ ಪರೀಕ್ಷೆಗಳನ್ನು ನಡೆಸಲು ಅವಕಾಶ ಇರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

**ಯೋಗ ಮಾಡೋರ ಸಂಖ್ಯೆ ಶೇ. 30ರಷ್ಟು ಹೆಚ್ಚಳ:** ದೇಶದಲ್ಲಿ ಯೋಗ ಜನಪ್ರಿಯವಾಗುತ್ತಿದ್ದು, ಕಳೆದ 2 ವರ್ಷಗಳಲ್ಲಿ ಯೋಗ ಮಾಡುವವರ ಪ್ರಮಾಣ ಶೇ. 30ರಷ್ಟು ಹೆಚ್ಚಾಗಿದೆ ಎಂದು ಸಚಿವರು ತಿಳಿಸಿದರು. ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಮಾಹಿತಿ ನೀಡಿದ ಅವರು, ಯೋಗಕ್ಕೆ ಉತ್ತೇಜನ ನೀಡುವುದಕ್ಕಾಗಿ ದೇಶಾದ್ಯಂತ 100ರಷ್ಟು ಪಾರ್ಕ್‌ಗಳನ್ನು ಯೋಗ ಪ್ರಾಕ್ಟೀಸ್ ಮಾಡುವವರಿಗಾಗಿ ಮೀಸಲಿಡಲು ನಿರ್ಧರಿಸಲಾಗಿದೆ ಎಂದರು. ಈ ಪಾರ್ಕ್‌ಗಳನ್ನು ಯೋಗ ಇಲ್ಲವೇ ಇತರ ಸಂಘಟನೆಗಳು ಸ್ವಯಂಆಸಕ್ತಿಯಿಂದ ನಿರ್ವಹಣೆ ಮಾಡಬೇಕಾಗುತ್ತದೆ.

**ಲಖನೌನಲ್ಲಿ ಪ್ರಧಾನ ಕಾರ್ಯಕ್ರಮ:** ಅಂತಾರಾಷ್ಟ್ರೀಯ ಯೋಗ ದಿನದ ಪ್ರಧಾನ ಕಾರ್ಯಕ್ರಮ ಉತ್ತರ ಪ್ರದೇಶದ ಲಖನೌನಲ್ಲಿ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಉ.ಪ್ರದೇಶ ಸಿಎಂ ಯೋಗಿ ಆದಿತ್ಯನಾಥ, ಯೋಗಗುರುಗಳ ಸಹಿತ ಸುಮಾರು 51000 ಮಂದಿ ಪಾಲ್ಗೊಳ್ಳುವರು ಎಂದು ಸಚಿವ ಶ್ರೀಪಾದ ನಾಯ್ಕ್ ಹೇಳಿದರು.